# ಅಧ್ಯಾತ್ಮದ ಮೇರುಗಿರಿ ಅಕ್ಕಮಹಾದೇವಿ

**ಪ್ರೊ. ಶೈಲಜ**

**ಮ**ನುಕುಲದ ಇತಿಹಾಸದಲ್ಲಿ ವಿಶ್ವದ ಪುಟಗಳಲ್ಲಿ ಅನೇಕ ದೃಷ್ಟಿಕೋನಗಳಿಂದ ೧೨ ನೆ ಶತಮಾನದ ಕರ್ನಾಟಕದ ಇತಿಹಾಸ ಸುವರ್ಣಾಕ್ಷರಗಳಿಂದ ಬರೆಯುವಂತಹುದು. ಇಡೀ ಪ್ರಪಂಚದಲ್ಲಿ ಹೆಣ್ಣು ದ್ವಿತೀಯ ದರ್ಜೆಯ ಪ್ರಜೆಯಾಗಿ ಬದುಕುತ್ತಿದ್ದ ಸಂದರ್ಭದಲ್ಲಿ, ಗಾರ್ಗೀ–ಮೈತ್ರೇಯಿಯರ ಕಾಲ ಮುಗಿದು ಹೋದಂತಹ ಕಾಲದಲ್ಲಿ, ಸಿಡಿಲಿನ ಕಿಡಿಯೇ ಅಕ್ಕಮಹಾದೇವಿಯ ರೂಪದಲ್ಲಿ ಭುವಿಗವತರಿಸಿದ ಸುವರ್ಣಕಾಲ ಅದು. ಆಕೆ ಹೆಣ್ಣಾಗಿ ಹುಟ್ಟಿಯೂ ತನ್ನ ಭವಬಂಧನಗಳನ್ನೆಲ್ಲಾ ಕೆಚ್ಚೆದೆಯಿಂದ ಕಳಚಿಕೊಳ್ಳುತ್ತಾ, ದೃಢ ಸಂಕಲ್ಪದಿಂದ ಅಧ್ಯಾತ್ಮಸಾಧನೆಗಾಗಿಯೇ ತನ್ನೆಲ್ಲಾ ಬದುಕನ್ನು ಸಂಪೂರ್ಣವಾಗಿ ಮುಡಿಪಾಗಿರಿಸಿ, ವೀರವಿರಾಗಿಣಿಯಾಗಿ ಜೀವನ್ಮುಕ್ತಳಾದ ಅದ್ವಿತೀಯ ಅತ್ಯಪೂರ್ವ ಅಮೃತಫಳಿಗೆ ಅದು.



ಮನುಷ್ಯ ಸಾಮಾನ್ಯರಂತೆಯೇ ಹುಟ್ಟಿ ಬೆಳೆದವಳು ಅಕ್ಕಮಹಾದೇವಿ. ಈಕೆ ಶಿವಮೊಗ್ಗೆಯ ಉಡುತಡಿಯ ದೈವಭಕ್ತರಾದ ಓಂಕಾರಶೆಟ್ಟಿ ಮತ್ತು ಲಿಂಗಮ್ಮ ದಂಪತಿಗಳ ಬಹು ದಿನಗಳ ಬೇಡಿಕೆಯ ಫಲವಾಗಿ ಹುಟ್ಟಿದ ಏಕಮಾತ್ರ ಸಂತಾನ. ಹುಟ್ಟಿದ ದಿನವೇ ಈಕೆಗೆ ಗುರುಜಂಗಮಶ್ರೇಷ್ಠರಿಂದ ಲಿಂಗದೀಕ್ಷಾಕಾರ್ಯ ನೆರವೇರುವುದು. ಮನೆಯ ಧಾರ್ಮಿಕ ವಾತಾವರಣ, ಗುರುಮಠದ ಅಧ್ಯಾತ್ಮದ ಕಡೆಗೆ ಆಕೆಗೆ ವಿಶೇಷ ಒಲವಿತ್ತು. ಬಾಲ್ಯದಲ್ಲಿಯೇ ದೇವರ ಪೂಜೆ ಪುನಸ್ಕಾರಾದಿಗಳಲ್ಲಿ ಆಕೆಗೆ ವಿಶೇಷ ಆಸಕ್ತಿಯಿತ್ತು. ಶ್ರೀಶೈಲದ ಚನ್ನಮಲ್ಲಿಕಾರ್ಜುನನ ಬಗೆಗಂತೂ ಎಲ್ಲಿಲ್ಲದ ವ್ಯಾಮೋಹ ಅವಳನ್ನಾವರಿಸಿತ್ತು. ಆಕೆಗೆ ೮–೧೦ ವರ್ಷ ತುಂಬುವ ವೇಳೆಗೆ, ಚಿಕ್ಕಂದಿನಿಂದಲೂ ಆಕೆಯ ಅಧ್ಯಾತ್ಮದ ಚಿಂತನೆಗಳಿಗೆ ನೀರೆರೆಯುತ್ತಾ ಬಂದಿದ್ದಂತಹ ಅದೇ ಊರಿನ ಗುರುಗಳಾದ ಗುರುಲಿಂಗದೇವರು ಆಕೆಯ ಇಷ್ಟದೈವ ಚನ್ನಮಲ್ಲಿಕಾರ್ಜುನನ ಅರುಹಿನ ಕುರುಹಾಗಿ ಆಕೆಗೆ ಇಷ್ಟಲಿಂಗದೀಕ್ಷಾ ಕಾರ್ಯವನ್ನು ನೆರವೇರಿಸುತ್ತಾರೆ. ಇಷ್ಟಲಿಂಗವೇ ಪತಿಯೆಂದು, ಅದನ್ನು ಪೂಜಿಸುವ ಭಕ್ತರೆಲ್ಲರೂ ಸತಿಯೆಂದು ತಿಳಿಸಿ, ಇಷ್ಟಲಿಂಗವನ್ನು ಪೂಜಿಸಬೇಕಾದ ಕ್ರಮವನ್ನು ಆಕೆಗೆ ಸವಿವರವಾಗಿ ತಿಳಿಸಿಕೊಡುತ್ತಾರೆ. ಹುಟ್ಟಿನಿಂದಲೇ ಅಧ್ಯಾತ್ಮದ ಒಲವಿದ್ದ ಆಕೆಯ ಮನಸ್ಸು ಈಗ ಇಷ್ಟಲಿಂಗ ದೀಕ್ಷೆಯ ಮೂಲಕ ಕರಸ್ಥಲದ ಇಷ್ಟಲಿಂಗದಲ್ಲಿಯೇ ಚನ್ನಮಲ್ಲಿಕಾರ್ಜುನನನ್ನು ಕಂಡು ಅದರಲ್ಲಿಯೇ ಮನಸ್ಸು ಸ್ಥಿರವಾಗಿ ನೆಟ್ಟು ಬೇರೂರುವುದು.

ಇಷ್ಟಲಿಂಗ ದೀಕ್ಷೆಯು ಅವಳಿಗೆ ನರಜನ್ಮವನ್ನು ತೊಡೆದು ಹರ ಜನ್ಮವನ್ನು ನೀಡಿತು. ಫಲವಾಗಿ ಆಕೆಯ ಭಕ್ತಿಯೆಲ್ಲವೂ ಕರಸ್ಥಲದ ಚನ್ನಮಲ್ಲಿಕಾರ್ಜುನನಲ್ಲಿ ಕೇಂದ್ರೀಕೃತಗೊಂಡು, ಆತನೇ ತನ್ನ ತಂದೆ ತಾಯಿ, ಬಂಧು ಬಳಗ, ಕೊನೆಗೆ ಪತಿಯ ರೂಪದಲ್ಲಿ ಆಕೆಯ ಮನದಲ್ಲಿ ಸ್ಥಿರವಾಗಿ ನೆಲೆನಿಂತನು. ತಂದೆತಾಯಿಯರ, ಗುರುಗಳ ಉದಾರತೆಯಿಂದ ಅಧ್ಯಾತ್ಮ ಶಿಕ್ಷಣದಲ್ಲಿ ಆಕೆ ಬಹಳ ಬೇಗ ಔನ್ನತ್ಯವನ್ನು ಸಾಧಿಸಿದಳು. ಶರಣಸತಿ ಲಿಂಗಪತಿ ಮಾರ್ಗದಲ್ಲಿ ಅವಳ ಭಕ್ತಿಯ ಸಾಧನೆ ಮುಂದುವರಿಯಿತು. ಗುರುಗಳಿಂದ ಕಲ್ಯಾಣದ ಶರಣರ ಕ್ರಾಂತಿಯ ವಿಚಾರಗಳನ್ನು ತಿಳಿದಳು; ಅಷ್ಟೇ ಅಲ್ಲ ಶರಣರ ವಚನಗಳನ್ನೂ ಪಡೆದುಕೊಂಡು ಓದಿ ವಿಚಾರವಂತಳಾದಳು. ಗುರುಗಳ ಪ್ರೋತ್ಸಾಹದಿಂದ ಅಂತಹ ವಚನಗಳನ್ನು ತಾನೂ ಬರೆದು ತನ್ನ ಇಷ್ಟದೈವ 'ಚನ್ನಮಲ್ಲಿಕಾರ್ಜುನ' ಎಂಬ ಅಂಕಿತವನ್ನು ಅದಕ್ಕೆ ಕೊಟ್ಟು ಸಂಭ್ರಮಿಸಿದಳು. ಹಾಗೆ ಬೆಳೆಯುವ ಹಾದಿಯಲ್ಲಿ ತನ್ನ ಬದುಕು, ತನ್ನ ಮನೋಭಾವ ಎಲ್ಲರಂತಿಲ್ಲದೆ, ಲೋಕಕ್ಕೆ ಭಿನ್ನವಾದ ರೀತಿಯಲ್ಲಿರುವುದನ್ನು ಗುರುತಿಸಿಕೊಂಡಳು. ತಾನು ಶರಣಸತಿಯೆಂದೂ ತನ್ನ ಪತಿ ಲಿಂಗಪತಿಯಾದ ಚನ್ನಮಲ್ಲಿಕಾರ್ಜುನನೆಂದೂ ಅಚಲವಾಗಿ ನಂಬಿದಳು. ಆತನ ಬಗೆಗೆ ತನ್ನ ಅತುಲ ವ್ಯಾಮೋಹ, ಸೆಳೆತ, ನಿಷ್ಠೆ ದಿನದಿಂದ ದಿನಕ್ಕೆ

ಲೇಖಕಿ ಮೈಸೂರಿನ ಜೆ.ಎಸ್. ಎಸ್. ಪದವಿ ಕಾಲೇಜಿನಲ್ಲಿ ಅಧ್ಯಾಪಕಿಯಾಗಿದ್ದಾರೆ. ಶರಣ ಸಾಹಿತ್ಯದಲ್ಲಿ ಇವರದು ಪಾಂಡಿತ್ಯಪೂರ್ಣ ಅಧ್ಯಯನ.

ವೃದ್ಧಿಯಾಗುತ್ತಿರುವುದನ್ನು ಕಂಡುಕೊಂಡಳು. ಅದರ ಫಲ ವಾಗಿ ಎಲ್ಲರಂತಿಲ್ಲದೆ, ಲೋಕಕ್ಕೆ ಭಿನ್ನವಾದ ವೀರವೈರಾಗ್ಯದ ಹಾದಿಯಲ್ಲಿ ತನ್ನ ಸಾಧನೆಯನ್ನು ಮುಂದುವರಿಸಿದಳು. ಅದಕ್ಕೆ ಬಸವಾದಿ ಶರಣರ ವಚನಗಳಿಂದಲೂ ಸ್ಫೂರ್ತಿ, ಪ್ರೇರೇಪಣೆ, ಆತ್ಮವಿಶ್ವಾಸ, ಆತ್ಮಸ್ಥೈರ್ಯಗಳನ್ನು ಪಡೆದುಕೊಂಡಳು. ಗುರುಗಳ ಬಳಿಯಲ್ಲಿ ತನ್ನ ಅಧ್ಯಾತ್ಮಸಾಧನೆಯ ವಿಚಾರಗಳನ್ನು ಚರ್ಚಿಸಿ ಗಟ್ಟಿಗೊಳಿಸಿಕೊಂಡಳು.

ಬೆಳೆದ ಮಗಳ ಮದುವೆಯ ಪ್ರಸ್ತಾಪ ತಂದೆತಾಯಿಯರ ಕಡೆಯಿಂದ ಬಂದಾಗ ಅದನ್ನು ಅಕ್ಕಮಹಾದೇವಿ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಅವರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳ ಲಿಲ್ಲ. ಆಕಸ್ಮಿಕವೆಂಬಂತೆ ನಡೆದ ಆ ಊರಿನ ತರುಣ ರಾಜ ಕೌಶಿಕನ ವೈಹಾಳಿಯ ಪ್ರಸಂಗದಲ್ಲಿ, ಅವನು ಅಕ್ಕಮಹಾದೇವಿಯನ್ನು ಕಂಡು ಮೋಹಿತನಾಗಿ ಮದುವೆಗಾಗಿ ಬಲಾತ್ಕರಿಸಿದಾಗ ಲೋಕದ ಗಂಡಂದಿರನ್ನು ಮದುವೆಯಾಗದ ತನ್ನ ಅಂತರಂಗದ ದಿಟ್ಟ ನಿರ್ಧಾರವನ್ನು ಅಕ್ಕಮಹಾದೇವಿಯು ತನ್ನ ತಂದೆತಾಯಿಗಳಿಗೆ ಹಾಗೂ ಗುರುಗಳಿಗೆ ತಿಳಿಸುವಳು. ಚಿಕ್ಕಂದಿನಿಂದಲೂ ಅವಳ ಅಧ್ಯಾತ್ಮ ಮನೋಧರ್ಮವನ್ನು ಗಮನಿಸಿದ್ದ ಗುರುಗಳಿಗೆ ಇದರಿಂದ ಆಶ್ಚರ್ಯವಾಗದಿದ್ದರೂ, ಅವಳ ತಂದೆತಾಯಿಗಳಿಗೆ ಮಾತ್ರ ಬರಸಿಡಿಲೆರಗಿದಂತಾಯಿತು; ಇದರ ಜೊತೆಗೆ ರಾಜನಿಂದ ಆಕೆಯನ್ನು ಮದುವೆಮಾಡಿಕೊಡುವಂತೆ ಅವಳ ತಂದೆತಾಯಿ ಗಳಿಗೆ ಬಲಾತ್ಕಾರ, ಒತ್ತಡ ಹೆಚ್ಚಾದಾಗ ಅವರಿಗೆ ದಿಕ್ಕೇ ತೋಚದಂತಾಯಿತು.

ಆಗ ಅಕ್ಕಮಹಾದೇವಿಯೇ ತನ್ನ ಮದುವೆಯ ಹಾಗೂ ತನ್ನ ಮುಂದಿನ ಬದುಕಿನ ಸಂಪೂರ್ಣ ಜವಾಬ್ದಾರಿಯನ್ನು ತಾನೇ ಹೊತ್ತುಕೊಳ್ಳುವ ಮೂಲಕ ತಂದೆತಾಯಿಯರನ್ನು ಆಪತ್ತಿನಿಂದ ಪಾರು ಮಾಡುವಳು. ಜೊತೆಗೆ ತನ್ನ ಬದುಕನ್ನು ತನಗೆ ಬೇಕಾದಂತೆ ರೂಪಿಸಿಕೊಳ್ಳುವ ಕೆಚ್ಚನ್ನು ತೋರುವ ಮೂಲಕ ಕ್ರಾಂತಿಕಾರಿಯಾದಳು; ತನ್ನ ಮದುವೆಯ ಸಂಪೂರ್ಣ ಜವಾಬ್ದಾರಿಯನ್ನು ತಾನೇ ಹೊತ್ತುಕೊಂಡಳು. ಲೋಕಕ್ಕೆ ವಿರುದ್ಧವಾದ ರೀತಿಯಲ್ಲಿ ತನ್ನ ಮದುವೆಯ ಕರಾರನ್ನು ತಾನೇ ರಾಜನೊಂದಿಗೆ ಹೇಳಿ, ಅದಕ್ಕೆ ಆತ ಒಪ್ಪಿದ ಮೇಲೆ ಅವನ ಅರಮನೆಗೆ ಹೋಗುವಳು. ಬಹಳ ಬೇಗನೇ ರಾಜ ಆಕೆಯ ಮನೋಧರ್ಮಕ್ಕೆ ವಿರುದ್ಧವಾಗಿ ನಡೆದು ಬಲಾತ್ಕರಿಸಿದಾಗ, ಅದು ಆಕೆಯ ಸಾಧನೆಗೆ ಅಡ್ಡಿಯಾಯಿತು, ರಾಜ ಈ ಕರಾರು ಮುರಿದ ಕಾರಣದಿಂದ ಅಕ್ಕಮಹಾದೇವಿ ಆ ಕ್ಷಣವೇ ಸ್ವತಂತ್ರಳಾಗಿ, ತನ್ನ ಬದುಕನ್ನು ತನ್ನ ಕೈಗೇ ತೆಗೆದುಕೊಂಡ ದಿಟ್ಟ ಹೆಣ್ಣಾಗಿ ಇತಿಹಾಸದಲ್ಲಿ ಗೋಚರಿಸುವಳು. ಆಕೆ ಪೂಜಾ ನಿರತಳಾಗಿದ್ದಾಗ ಕೌಶಿಕ ಮೋಹಿತನಾಗಿ ಆಕೆಯನ್ನು ಬಿಗಿದಪ್ಪಲು ಹೋದಾಗ ಆಕೆ ಮೈಕೊಡವಿ ಮೇಲೇಳುವಾಗ ಉಟ್ಟ ಒಂಟಿ ಬಟ್ಟೆಯ ಸೆರಗು ಅವನ ಕೈಯಲ್ಲಿ ಉಳಿಯಲು, ಪೂರ್ತಿ ಸೀರೆಯನ್ನೇ ಆತನಿಗೆ ಸೆಳೆದುಕೊಟ್ಟು, ಆತ ಮೋಹಿಸುತ್ತಿದ್ದ ತನ್ನ ನಶ್ವರ ದೇಹಸೌಂದರ್ಯವನ್ನು ನೋಡೆಂದು ಹೇಳಿ, ಆತನ ಮುಂದೆ ದಿಗಂಬರಳಾದ ಅಕ್ಕನ ವೈರಾಗ್ಯದ ತುಟ್ಟತುದಿಯನ್ನು ನೆನೆದರೆ ಇಂದಿಗೂ ಎದೆ ಝಲ್ಲೆನ್ನುತ್ತದೆ. ಆ ಪ್ರಸಂಗದಲ್ಲಿ ಕಂಡುಬರುವ ಅಕ್ಕನ ವಿರಕ್ತ ಬದುಕಿನ ಔನ್ನತ್ಯಕ್ಕೆ, ಅಧ್ಯಾತ್ಮಸಿರಿಗೆ ಇಂದಿಗೂ ನಮ್ಮ ಮಾತು ಮೂಕವಾಗುತ್ತದೆ; ತಲೆ ಬಾಗುತ್ತದೆ, ಮನಸ್ಸು ಅರಳುತ್ತದೆ. ಅದುವರೆಗೂ ಅಂತರಂಗದಲ್ಲಿಯೇ ವಿಕಸಿಸುತ್ತಿದ್ದ ಆಕೆಯ ಅಧ್ಯಾತ್ಮದ ಹಂಬಲ ಅದರ ಪರಿಪೂರ್ಣತೆಗಾಗಿ ಈಗ ಬಹಿರಂಗದಲ್ಲಿ ಸಿಡಿದು, ಲೋಕವಿಖ್ಯಾತವಾಗಿ ವಿರಾಗದ ಅನಂತದೆಡೆಗೆ ಆಕೆಯ ಪಯಣ ಮುಂದುವರಿಯುವುದು. ಅರಮನೆಯಿಂದ ಹೊರಟ ಅಕ್ಕ ತಂದೆತಾಯಿಗಳಿಗೆ ಅಂತಿಮ ನಮನ ಸಲ್ಲಿಸಿ, ಗುರುಗಳ ಒತ್ತಡಕ್ಕೆ ಮಣಿದು ಕೂದಲ ಮರೆಯ ದಿಗಂಬರತ್ವಕ್ಕೆ ಕನಿಷ್ಠ ನಾರುಮಡಿಯನ್ನು ಧರಿಸಿ, ಭಗವಂತನ ಸಾಕ್ಷಾತ್ಕಾರದ ಸಾಧನೆಗಾಗಿ ಬಸವಾದಿ ಶರಣರಿದ್ದ ಕಲ್ಯಾಣದ ಕಡೆಗೆ ನಡೆಯುವಳು. ಆ ಸುದೀರ್ಘ ಪಯಣದಲ್ಲಿ ನಾನಾ ಅನುಭವಗಳನ್ನು ಪಡೆಯುತ್ತಾ, ಅದಕ್ಕೆ ತನ್ನ ಪ್ರತಿಕ್ರಿಯೆಗಳನ್ನು ವಿವರಿಸುತ್ತಾ, ಅವುಗಳನ್ನು ಕಲಾತ್ಮಕವಾಗಿ ಬಸವಾದಿ ಶರಣರಂತೆ ವಚನಗಳಲ್ಲಿಯೂ ಅಭಿವ್ಯಕ್ತಿಸುತ್ತಾ ಹೋದ ಆಕೆ ಇಂದು ಕನ್ನಡದ ಮೊಟ್ಟಮೊದಲ ಕವಯಿತ್ರಿ ಅಷ್ಟೇ ಅಲ್ಲ, ಮೊಟ್ಟಮೊದಲ ಮಹಾಕವಯಿತ್ರಿ ಎಂಬ ಹೆಗ್ಗಳಿಕೆಗೆ ಪಾತ್ರಳಾಗಿದ್ದಾಳೆ.

ಅಕ್ಕ ಕಲ್ಯಾಣ ತಲುಪಿದಾಗ ಅಲ್ಲಮಪ್ರಭುವಿನ ಬಗೆಬಗೆಯ ಪ್ರಶ್ನೆಗಳಿಗೆ ಆಕೆ ಅತ್ಯಂತ ಸಮರ್ಪಕವಾಗಿ ಉತ್ತರಿಸುವ ಮೂಲಕ ಆಕೆಯ ಅಂತರಂಗದ ಮನ-ಭಾವಗಳ ವಿಕಸನ ಮತ್ತು ಅಧ್ಯಾತ್ಮದ ಸಾಧನೆಗಳು ಜಗಜ್ಜಾಹೀರಾಗಿ ಲೋಕಮಾನ್ಯತೆಯನ್ನೂ, ಶರಣರ ಮನ್ನಣೆಯನ್ನೂ ಪಡೆದು ಗೌರವಿಸಲ್ಪಟ್ಟಳು ಹಾಗೂ ಶರಣರ ಸಂಗದಲ್ಲಿ ಕೆಲವು ಕಾಲ ಕಳೆದು ತನ್ನ ಅಧ್ಯಾತ್ಮಸಾಧನೆಯ ಗೊತ್ತು ಗುರಿಗಳ ಖಚಿತ ನೆಲೆಯಲ್ಲಿ ಮುಂದುವರಿದಳು. ಅವಳ ಅಧ್ಯಾತ್ಮಸಾಧನೆಯ ಪ್ರತಿರೂಪಗಳಾಗಿ ಅವಳ ವಚನಗಳು ಇಂದು ನಮ್ಮ ಮುಂದೆ ಕಂಗೊಳಿಸುತ್ತಿವೆ. ಅವುಗಳ ಸೂಕ್ಷ್ಮವಾದ ಅಧ್ಯಯನದಿಂದ ಅವಳ ಸಾಧನೆಯ ಎತ್ತರ ಬಿತ್ತರಗಳನ್ನು ದರ್ಶಿಸಬಹುದಾಗಿದೆ. ಇಲ್ಲಿ ಅವುಗಳ ಸ್ಥೂಲ ಪರಿಚಯವನ್ನಷ್ಟೇ ಮಾಡಲಾಗಿದೆ. ಈ ಪ್ರಯತ್ನ ಅವಳ ವಚನಗಳ ಆಳವಾದ ಅಧ್ಯಯನಕ್ಕೆ ಪ್ರೇರೇಪಿಸುವಂತಾಗಲಿ.

*(ಮುಂದುವರಿಯುವುದು)*

ಹಸಿವಾದೊಡೆ ಭಿಕ್ಷಾನ್ನಗಳುಂಟು;
ತೃಷೆಯಾದೊಡೆ ಕೆರೆಹಳ್ಳಬಾವಿಗಳುಂಟು
ಶಯನಕ್ಕೆ ಹಾಳುದೇಗುಲಗಳುಂಟು
ಚೆನ್ನಮಲ್ಲಿಕಾರ್ಜುನಯ್ಯ,
ಆತ್ಮಸಂಗಾತಕ್ಕೆ ನೀನೆನಗುಂಟು!

– ಅಕ್ಕಮಹಾದೇವಿ